ANUBHAVS



# ನನಗೆ ಹೊಸ ಜೀವನ ಸಿಕ್ಕಿತು

© Copyright 2010, Manasamarthyadata.com



*- ಬನ್ಸಿ ಪ್ರಸಾದ್ ಚೌಬೆ, ಸೋಲಾಪುರ*

ದಿನಾಂಕ 9 ಆಗಸ್ಟ್ 2007 ನನ್ನ ಜೀವನದ ಬಹಳ ಮಹತ್ವಪೂರ್ಣ ಹಾಗೂ ಯಾವತ್ತಿಗೂ ಮರೆಯಲಾಗದ ದಿನ. ರಾಮನಾಮದ 171 ಪುಸ್ತಕ ಬಾಪೂರವರೇ ನನ್ನಿಂದ ಬರೆಯಿಸಿದರು. ಅದುದರಿಂದ ಆ ದಿನ ಬಾಪೂಜಿಯವರ ಚರಣ ಸ್ಪರ್ಶಕ್ಕಾಗಿ ಹ್ಯಾಪೀ ಹೋಮ್‌ನಿಂದ ಕರೆ ಬಂದಿತು. ನಾನು ಸದ್ಗುರು ಬಾಪೂಜಿಯವರಿಗೆ ಸಾಷ್ಟಾಂಗ ಪ್ರಣಾಮ ಮಾಡಿದೆನು. ಬಾಪೂಜಿಯವರು ನನಗೆ ಆಶೀರ್ವಾದ ಕೊಟ್ಟರು. ಅದು ಅತ್ಯಂತ ಆನಂದದ ಕ್ಷಣವಾಗಿತ್ತು. ನನಗೆ ನನ್ನ ಜೀವನ ಸಾರ್ಥಕವಾಯಿತೆನಿಂಸಿತು. ನಿಜವಾಗಿ ಆ ದಿನಕೊಸ್ಕರ ನನ್ನ ಪತ್ನಿ ಧನಂವತಿ ಹಾಗೂ ಅವಳ ಅಣ್ಣ ಡಾ. ಮದನ್ ಠಾಕೂರ್‌ದಾಸರು ಉತ್ಸಹಿಸಿದ್ದರು. ಆದರೆ, ಪ್ರೇರಣೆ ಮಾತ್ರ ಪರಮಪೂಜ್ಯ ಬಾಪೂರವರೇ ಕೊಟ್ಟಿದ್ದರು.

ಜೀವನದ ಕಠಿಣ ದಿನದ ನೆನಪುಗಳು ಈ ಚರಣ ಸ್ಪರ್ಶದಿಂದಲೇ ಹರಿದುಹೋಯಿತು. ತುಂಬಾ ಕಠಿಣವಾಗಿತ್ತು ಆ ದಿನಗಳು. ಆಗಸ್ಟ್ 2006ರಂದು ನನಗೆ ಕಾಯಿಲೆ ಆಗಿತ್ತು. ಅದು ಬಹಳ ಭಯಂಕರ ಕಾಯಿಲೆ ಹಾಗೂ ಅದರಿಂದ ಹೊರಗೆ ಬರುವುದು ತುಂಬಾ ಕಷ್ಟ ಎಂದು ಸೋಲಾಪುರದ ಡಾಕ್ಟರ್‌ರು ಹೇಳಿದರು. ಆದುದರಿಂದ ಉಪಚಾರಕ್ಕಾಗಿ ನನ್ನನ್ನು ಮುಂಬಯಿಗೆ ಕಳುಹಿಸಿದರು. ಮುಂಬಯಿಯ ವಿಶೇಷ ತಜ್ಞರ ಸಲಹೆಯಿಂದ ಕೆಲವು ಟೆಸ್ಟ್ ಹಾಗೂ ಎಂ.ಆರ್.ಐ. ಮಾಡಲಾಯಿತು. ನನ್ನ ತಲೆಯ ಕೆಳಗಿನ ಭಾಗದಲ್ಲಿ ಇನ್‌ಫೆಕ್ಸನ್ ಆಗಿತ್ತು. ಒಂದೇ ತಿಂಗಳಲ್ಲಿ ನನ್ನ ಭಾರ 15 ಕೆ.ಜಿ. ಕಡಿಮೆಯಾಯಿತು. ನನ್ನ ಆರೋಗ್ಯ ಬಹಳ ದು:ಸ್ಥಿತಿಗೆ ಬಂತು. ಆ ಕಾಯಿಲೆಯಿಂದ ಹೊರಗೆ ಬರುವುದು ಅಸಂಭವವಾಗಿತ್ತು. ನಾನು ಮುಂಬಯಿಯಲ್ಲಿರುವಾಗ ಒಮ್ಮೆ ಪರಮಪೂಜ್ಯ ಬಾಪೂಜಿಯವರ ದರ್ಶನ ಮಾಡಲಿಕ್ಕೆ ಹೋಗಿದ್ದೆನು. ಬಾಪೂಜಿಯವರಿಂದ ಆಶೀರ್ವಾದ ಹಾಗೂ ಉದಿ ಪ್ರಸಾದ ಸಿಕ್ಕಿತ್ತು. ಅದರ ನಂತರ ಸೋಲ್ಲಾಪುರದ ಡಾ. ಸಮೀರ್ ನನ್ನ ಉಪಚಾರ ಮಾಡಿದರು. ಕೇವಲ ಬಾಪೂಜಿಯವರ ಆಶೀರ್ವಾದದಿಂದಲೇ ನಾನು ಪೂರ್ಣ ಗುಣವಾದೆನು. ಇದು ಕೇವಲ ಪರಮೇಶ್ವರನ ಕೃಪೆ

ಅಲ್ಲದೆ ಈ ಕಾಯಿಲೆಯಿಂದ ಹೊರಗೆ ಬರುವುದು ಅಸಂಭವ ಎಂದು ಮುಂಬಯಿಯ ಡಾಕ್ಟರ್‌ರು ಹೇಳಿದರು. ಬಾಪೂಜಿಯವರು ನನಗೆ ಹೊಸ ಜೀವನವನ್ನು ಕೊಟ್ಟರು.

ನನ್ನ ಎರಡನೇ ಅನುಭವ ಕೆಳಗಿನಂತಿದೆ. ಉಸಮಾನ ಜಿಲ್ಲೆಯ ಗಟಾಲೀ ಊರಿನಲ್ಲಿ ನನ್ನ ಸ್ವಲ್ಪ ಗದ್ದೆ ಇದೆ. ಕೃಷಿಗೋಸ್ಕರ ನೀರಿನ ಪ್ರಯತ್ನದಲ್ಲಿದ್ದೆನು. ನೀರು ಸಿಗುವ ಆಸೆ ತುಂಬಾ ಕಡಿಮೆ ಇತ್ತು. ಆದರೆ, ಪರಮಪೂಜ್ಯ ಬಾಪೂಜಿಯವರ ಪ್ರತಿ ನನಗೆ ಶ್ರದ್ಧೆ ಇತ್ತು. ಆರಂಭ ಮಾಡುವ ಮುಂಚೆ ಅಲ್ಲಿ ಉದಿ ಇಟ್ಟು ಪೂಜೆ ಮಾಡಿದೆನು ಹಾಗೂ ಬಾಪೂರವರ ಜಪ ಮಾಡಿದೆನು. 450 ಫೀಟ್ ಕೆಳಗೆ ತುಂಬಾ ದೊಡ್ಡ ಪ್ರಮಾಣದಲ್ಲಿ ನೀರು ಸಿಕ್ಕಿತು. ಇದು ಕೇವಲ ನನ್ನ ಸದ್ಗುರುವಿನ ಕೃಪಾದೃಷ್ಟಿಯಿಂದ ಸಾಧ್ಯವಾಯಿತು.

ಕೇವಲ ಪರಮಪೂಜ್ಯ ಬಾಪೂಜಿಯವರ ಆಶೀರ್ವಾದದಿಂದಲೇ ನನ್ನ ಜೀವನ ಸುಖಮಯವಾಯಿತು.

ANUBHAVS

# HARI OM

© Copyright 2010, Manasamarthyadata.com

manasamarthyadata.com